

# ವಿಜ್ಞಾನ ಸಂವಹನ ಶ್ರೀಮತಿ ಮಾದರಿ

**ವಿಜ್ಞಾನ ಸಂವಹನ ಕ್ಷೇತ್ರದಲ್ಲಿ ಜನಪ್ರಿಯರಾದ ಕನ್ನಡಿಗರ ಸಾಲಿನಲ್ಲಿ ಶ್ರೀಮತಿ ಹರಿಪ್ರಸಾದ್ ಅವರದು ಮೊದಲ ಪಂಕ್ತಿಯ ಹೆಸರು.**

■ ಮೀನಾ ಮೈಸೂರು

ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಬರಹವೆಂದರೆ, ವಿಜ್ಞಾನ ಸಮಾವೇಶಗಳೆಂದರೆ, ನಾಟಕವೆಂದರೆ, ಸಾಂಸ್ಕೃತಿಕ, ವಿಜ್ಞಾನ ಕಾರ್ಯಕ್ರಮಗಳ ಬುಲೆಟಿನ್ ಎಂದರೆ ಥಟ್ಟನೆ ನೆನಪಾಗುವುದು 88ರ ಹರೆಯದ, ಸದಾ ಕಾರ್ಯಮಗ್ನರಾಗಿರುವ, ಉತ್ಸಾಹದಿಂದ ಪುಟಿಯುತ್ತಿರುವ ಶ್ರೀಮತಿ ಹರಿಪ್ರಸಾದ್.

ಕೆ.ಎಸ್. ರಾಜಯ್ಯಂಗಾರ್, ಸರೋಜಮ್ಮ ದಂಪತಿಯ ಎರಡನೆಯ ಪುತ್ರಿ ಶ್ರೀಮತಿ. ಮಾರ್ಚ್ 7, 1936ರಲ್ಲಿ ಬೆಂಗಳೂರಿನಲ್ಲಿ ಜನಿಸಿದ ಇವರು ಮೈಸೂರಿನಲ್ಲಿ ವಿಜ್ಞಾನದಲ್ಲಿ ಪದವಿ, ಸಮಾಜ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ, ಇಂಗ್ಲಿಷ್‌ನಲ್ಲಿ ಪಿ.ಜಿ. ಡಿಪ್ಲೊಮಾ ವ್ಯಾಸಂಗ ಮಾಡಿದರು. ಹಲವು ಜನಪ್ರಿಯ ವಿಜ್ಞಾನ ಸಂವಹನ ಕಾರ್ಯದಲ್ಲಿ 1961ರಿಂದಲೂ ತೊಡಗಿಸಿಕೊಂಡಿರುವ ಇವರು, ‘ಸಿಎಫ್‌ಟಿಆರ್‌ಐ’ನ (ಭಾರತೀಯ ಆಹಾರ ಸಂಸ್ಥೆ) ಮಾಹಿತಿ ವಿಭಾಗದ ಮುಖ್ಯಸ್ಥರಾಗಿ ವಿಜ್ಞಾನಕ್ಕೆ ಸಂಬಂಧಿಸಿದಂತೆ, ಮುಖ್ಯವಾಗಿ ಆಹಾರ ವಿಜ್ಞಾನ ಮತ್ತು ತಂತ್ರಜ್ಞಾನ ಕುರಿತು ಪುಸ್ತಕಗಳು, ವಾರ್ತಾಪತ್ರ, ವಸ್ತುಪ್ರದರ್ಶನ, ಬುಲೆಟಿನ್, ವಿಡಿಯೊ, ವಿವಿಧ ಕಾರ್ಯಕ್ರಮಗಳು, ಬರಹ ಮತ್ತು ಸಂಪಾದನೆ ಹೀಗೆ ಎಲ್ಲಾ ಮಗ್ಗಲುಗಳಲ್ಲಿ ಕೆಲಸ ಮಾಡಿದವರು. ಪುಸ್ತಕ, ಪ್ರಚಾರ ಮಾಹಿತಿ, ಪುಟಗಳ ವಿನ್ಯಾಸಗಳ ಜವಾಬ್ದಾರಿ ಹೊತ್ತು ಮುದ್ರಣ ಕ್ಷೇತ್ರದಲ್ಲೂ ಪರಿಣತಿ ಸಾಧಿಸಿದವರು.

2001ರಲ್ಲಿ ಜರ್ಮನಿಯಲ್ಲಿ ನಡೆದ ಮಕ್ಕಳ ವಿಜ್ಞಾನ ಕಾಂಗ್ರೆಸ್‌ನಲ್ಲಿ ಮಕ್ಕಳೊಂದಿಗೆ ಭಾರತ ಸರ್ಕಾರದ ಡಿಎಸ್‌ಟಿ ವತಿಯಿಂದ ಜರ್ಮನಿಗೆ ಭೇಟಿ ನೀಡಿದ್ದರು. ನವದೆಹಲಿಯ ಸಿಎಸ್‌ಐಆರ್‌ಗೆ ಎರಡು ವರ್ಷ ವಿಜ್ಞಾನ ವರದಿಗಾರ್ತಿಯಾಗಿ ಕೆಲಸ ನಿರ್ವಹಿಸಿದರು. ಜ್ಞಾನಗಂಗೋತ್ರಿ ವಿಶ್ವಕೋಶ, ಬಾಲವಿಜ್ಞಾನದ ಜೊತೆಗೆ ಅನೇಕ ಸ್ಮರಣಸಂಚಿಕೆಗಳು, ಪತ್ರಿಕೆಗಳು, ನಿಯತಕಾಲಿಕಗಳಲ್ಲಿ ಇದುವರೆಗೂ ಇವರ ಸುಮಾರು 2000 ಬಿಡಿ ಲೇಖನಗಳು ಪ್ರಕಟಗೊಂಡಿವೆ. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್‌ನ ಬಾಲವಿಜ್ಞಾನದ ಸಂಪಾದಕಿಯಾಗಿ 1978ರಿಂದ ಇಂದಿನವರೆಗೂ 47 ವರ್ಷಗಳ ನಿರಂತರ ಸುದೀರ್ಘ ಸೇವೆ ಸಲ್ಲಿಸುತ್ತಿರುವ ಇವರಲ್ಲಿ ಇಂದಿಗೂ ಉತ್ಸಾಹ ಕುಗ್ಗಿಲ್ಲ.

ಅಂತರರಾಷ್ಟ್ರೀಯ ಭೂ ವಿಜ್ಞಾನ ಸಮಾವೇಶದಲ್ಲಿ 8 ದಿನಗಳ ಕಾಲ ಇಂಗ್ಲಿಷ್‌ನಲ್ಲಿ ನಿತ್ಯ ಬುಲೆಟಿನ್ ತಂದಿದ್ದಾರೆ. ನಾಡಿನ ಪ್ರತಿಷ್ಠಿತ ರಂಗಾಯಣದ ಬಹುರೂಪಿ ಅಂತರರಾಷ್ಟ್ರೀಯ ನಾಟಕೋತ್ಸವದ ದೈನಿಕ ವಾರ್ತಾಪತ್ರದ ಪರಿಕಲ್ಪನೆಯನ್ನು ಅದರ ಸ್ಥಾಪಕ ಸಂಪಾದಕಿಯಾಗಿ ಇಷ್ಟು ವರ್ಷಗಳೂ ವಾರ್ಷಿಕವಾಗಿ ಏಳು ದೈನಿಕ ಬುಲೆಟಿನ್ ಉತ್ಪಾದನಾ ಕಾರ್ಯಗಳೊಂದಿಗೆ ಪ್ರಕಟಿಸುವುದರ ಮೂಲಕ ಬರಹ, ಸಂಪಾದನಾ ಕ್ಷೇತ್ರದಲ್ಲಿನ ತಮ್ಮ ಪ್ರತಿಭೆಯನ್ನು ದಣಿವರಿಯದಂತೆ ಕಾಪಿಟ್ಟುಕೊಂಡಿರುವ ಚೈತನ್ಯಮಯಿ.

ರಾಷ್ಟ್ರೀಯ ಮಕ್ಕಳ ವಿಜ್ಞಾನ ಸಮಾವೇಶ, ರಾಷ್ಟ್ರೀಯ ವಿಜ್ಞಾನ ಅಧ್ಯಾಪಕರ ಸಮಾವೇಶ, ರಾಜ್ಯಮಟ್ಟದ ಮಕ್ಕಳ ವಿಜ್ಞಾನ ಕಾಂಗ್ರೆಸ್ ಮುಂತಾದ ಕಾರ್ಯಕ್ರಮಗಳ ರೂಪುರೇಷೆ, ಆರ್ಥಿಕ ಸಹಯೋಗ, ತಾಂತ್ರಿಕ ನಿರ್ವಹಣೆಯ ಜವಾಬ್ದಾರಿ ಹೊತ್ತು ಅತ್ಯಂತ ಯಶಸ್ವಿ ಸಂಘಟಕಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಸುಮಧುರ ಹಾಡುಗಾರ್ತಿಯಾಗಿ, ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಸೀನಿಯರ್ ಪರೀಕ್ಷೆ ಪಾಸು ಮಾಡಿದ್ದಾರೆ. ಆಕಾಶವಾಣಿಯ ನಾಟಕಗಳಲ್ಲಿ 1956ರಲ್ಲಿ ನಟಿಸಲಾರಂಭಿಸಿರುವ ಇವರು ಸುಮಾರು ನೂರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅವರ ರಂಗದ ನಂಟು ಇಂದಿಗೂ ಮುಂದುವರೆದಿದೆ. ‘ಒಲವು ಗೆಲವು’, ‘ಹೇಮಾವತಿ’ ‘ಹೆಬ್ಬುಲಿ’ ‘ಇಂದಿರಾ’ ಮುಂತಾದ ಚಲನಚಿತ್ರಗಳಲ್ಲಿ ನಟಿಸಿರುವ ಹಿರಿಮೆ ಇವರದು.

ಜಗದೀಶ್ ಚಂದ್ರಬೋಸ್ ಕುರಿತು ‘ಬಂಕಿಮಚಂದ್ರ ಚಟರ್ಜಿ’ ಪುಸ್ತಕವನ್ನು ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ ಮಾಡಿದ್ದಾರೆ. ‘ಆರೋಗ್ಯಕ್ಕಾಗಿ ಆಹಾರ’, ‘ನೆಹರು ಮತ್ತು ವಿಜ್ಞಾನ’ ಸಂಪಾದಿತ ಕೃತಿಗಳಲ್ಲದೆ 20 ವಿಜ್ಞಾನ ಪುಸ್ತಕಗಳ ಸಂಪಾದಕಿ, ಅನುವಾದಕಿ ಕೂಡ ಹೌದು. ಅನೇಕ ವಿಜ್ಞಾನ ಕಾರ್ಯಾಗಾರಗಳಿಗೆ ಸಂಪನ್ಮೂಲ ವ್ಯಕ್ತಿ ಹಾಗೂ ನಿರ್ದೇಶಕಿಯಾಗಿಯೂ ಹೆಸರಾಗಿದ್ದಾರೆ. ಸುಮಾರು ಒಂದೂವರೆ ದಶಕಗಳ ಕಾಲ ಶಾಲಾ ಕಾಲೇಜುಗಳಲ್ಲಿ ವಿಜ್ಞಾನ ಕಾರ್ಯಕ್ರಮಗಳು, ವಸ್ತುಪ್ರದರ್ಶನಗಳ ಆಯೋಜನೆ, ಕರ್ನಾಟಕ ವಿಜ್ಞಾನ ಪರಿಷತ್‌ನಿಂದ ನಡೆದ ವಿಜ್ಞಾನ ಬರಹಗಳ 30 ಕಾರ್ಯಾಗಾರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ, ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ.

ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಕಲಾಸುರುಚಿ, ಮೈಸೂರು ವಿಜ್ಞಾನ ಕೇಂದ್ರ, ಮೈಸೂರು ಗ್ರಾಹಕರ ಪರಿಷತ್ತು, ಸಮತಾ ವೇದಿಕೆ, ಅಮರಕಲಾ ಸಂಘ, ಮೈಸೂರು ಸೈನ್ಸ್ ಫೆಸ್ಟಿವಲ್ ಟ್ರಸ್ಟ್ ಮುಂತಾದವುಗಳ ಸದಸ್ಯೆಯಾಗಿದ್ದ ಇವರಿಗೆ ಅನೇಕ ಪ್ರಶಸ್ತಿ ಪುರಸ್ಕಾರಗಳು ಬಂದಿವೆ. 2003ರಲ್ಲಿ ಕಲ್ಪನಾ ಚಾವ್ಲಾ ಪ್ರಶಸ್ತಿ, 2007ರಲ್ಲಿ ಭಾರತ ಸರ್ಕಾರದ ಎನ್‌ಸಿಎಸ್‌ಟಿಸಿ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಸಂಚಿಹೊನ್ನಮ್ಮ ಪ್ರಶಸ್ತಿ, ಗ್ಲೊಬಲ್ ಅಸೋಸಿಯೇಷನ್ ಫಾರ್ ಸೈಂಟಿಫಿಕ್ ಮೈಂಡ್ಸ್ ಪ್ರಶಸ್ತಿಯಲ್ಲದೆ ರಂಗಭೂಮಿಯಲ್ಲಿನ ಇವರ ಸಾಧನೆ ಗುರುತಿಸಿ 2006ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಲಾಗಿದೆ.

ಚಿತ್ರ: ಅನೂಪ್ ರಾಘ ಟಿ.